Vol. 1, Issue: 1, April: 2013 (IJRSML) ISSN: 2321 - 2853

# ಮಾನವತಾವಾದ ಒಂದು ವಿವೇಚನೆ

DR. Y.A.DEVARUSHI
Assistant professor
Kannada Dept,
C.B.College BHALKI, Karnatak State, Dist: BIDAR,

## 1. ಪ್ರವೇಶಿಕೆ

ಮಾನವತಾವಾದದ ಚಿಂತನೆ ಆಧುನಿಕ ಯುಗದ ಕೊಡುಗೆಯಾಗಿ ಕಂಡರೂ ಅದರ ಬೇರುಗಳು ಪ್ರಾಚೀನ ಕಾಲಕ್ಕೆ ಹಬ್ಬಿಕೊಂಡಿವೆ. ಅದೊಂದು ವಾದವಾಗಿ, ತಾರ್ಕಿಕ ಚರ್ಚೆಯಾಗಿ ಬೆಳೆದದ್ದು ಮಾತ್ರ ಈಚೆಗೆ ಎಂಬುದು ನಿರ್ವಿವಾದವಾಗಿದೆ. ಸಾಮಾನ್ಯವಾಗಿ ಮಾನವನ ಕಲ್ಯಾಣವನ್ನು ಬಯಸುವ ಅವನ ಶ್ರೇಷ್ಠತೆಯನ್ನು ಎತ್ತಿ ತೋರಿಸುವ ಮಾನವನ ಸಾಧನೆ ಸಿದ್ಧಿಗಳನ್ನು ಗೌರವಿಸುವ, ಅವುಗಳಲ್ಲಿ ನಂಬಿಕೆಯಿಡುವ ಹಾಗೂ ಆ ನಿಟ್ಟಿನಲ್ಲಿ ಶ್ರಮಿಸುವ ಮಾನವರೇ ಮಹಾಮಾನವತಾವಾದಿಗಳು. ಈ ಮಾನವತಾವಾದಿಗಳು ಮಾನವನ ಚೈತನ್ಯಕ್ಕಾಗಿ, ಕಲ್ಯಾಣಕ್ಕಾಗಿ ಸಾಧನವಾಗಿ ಮಾಡಿಕೊಂಡ ಕ್ರಿಯಾತ್ಮಕ ಹಾಗೂ ತಾತ್ವಿಕ ಮಾನದಂಡವೇ ಮಾನವತಾವಾದ. “ಮಾನವನ ಹಿತಚಿಂತನೆಯೇ ಮುಖ್ಯ ಆದರ್ಶವಾಗಿರುವ ಯಾವುದೇ ಒಂದು ತತ್ವ”[1] ಮಾನವತಾವಾದ. “ಇದು ಮೂಲತಃ ಮಾನವನ ಗೌರವನ್ನಾಧರಿಸಿ ಬೆಳೆದ ಸಿದ್ಧಾಂತವಾದರೂ ಕಾಲದಿಂದ ಕಾಲಕ್ಕೆ ಐತಿಹಾಸಿಕವಾಗಿ ಬದಲಾಗುತ್ತಿರುವ ಅರ್ಥ ಮತ್ತು ಕಾರ್ಯವ್ಯಾಪ್ತಿಗಳನ್ನು ಹೊಂದಿದ ಸಿದ್ಧಾಂತ.”[2] ಅಷ್ಟೇ ಅಲ್ಲ ಅದು “ಮಾನವನ ಘನತೆಗೆ ಅವನ ನಿರ್ಬಂಧಿತ ಬೆಳವಣಿಗೆಗೆ ಹಾಗೂ ಸುಖ–ಸಂತೋಷಗಳಿಗೆ ಗೌರವದ ಮೇಲೆ ಆಧರಿಸಿದ ಐತಿಹಾಸಿಕವಾಗಿ ಬದಲಾಗುತ್ತಿರುವ ಅಭಿಪ್ರಾಯಗಳ ಒಂದು ಪದ್ಧತಿ.”[3] ಮಾನವತಾವಾದ ಇಂದು ತನ್ನ ಅರ್ಥ ಮತ್ತು ಕಾರ್ಯವ್ಯಾಪ್ತಿಗಳನ್ನು ವಿಕಸನಗೊಳಿಸಿಕೊಳ್ಳುತ್ತಿರುವ ಪದವಾಗಿದೆ. ಮಾನವತಾವಾದದ ಅರ್ಥ, ಉಗಮ, ವಿಕಾಸ, ವ್ಯಾಪ್ತಿಗಳ ವಿಶ್ಲೇಷಣೆಯಿಂದ ಅದರ ಸ್ವರೂಪದ ಅರಿವು ಉಂಟಾಗುತ್ತದೆ.–
“Humanism a system of views based on respect for the dignity and rights of man. His value as a personality. Concern for his welfare, his all-round development, and the creation of favourable conditions for social life”[4]

ಮಾನವನ ಸಂಸ್ಕೃತಿ, ಅವನ ನಡೆ–ನುಡಿಗಳು ದೇಶದಿಂದ ದೇಶಕ್ಕೆ ಭಿನ್ನವಾಗಿರಬಹುದು. ಅಲ್ಲದೆ ಮಾನವನ ವೃತ್ತಿಗಳು ಬೇರೆ ಬೇರೆಯಾಗಿರಬಹುದು. ಅದರೆ ಆತ ಜಗತ್ತಿನ ಯಾವ ಮೂಲೆಯಲ್ಲಿದ್ದರೂ ಅವನು ಮಾನವನೇ. ಅವನ ಮೂಲ ಪ್ರವೃತ್ತಿಗಳಾದ ಹಸಿವು, ನೀರಡಿಕೆ, ನಿದ್ರೆ, ಮೈಥುನ, ಸಂತೋಷ, ತೃಪ್ತಿ, ನಗು–ಅಳು ಎಲ್ಲರಲ್ಲಿಯೂ ಮೂಲಭೂತವಾಗಿ ಇದ್ದೇ ಇರುತ್ತವೆ. ಕೆಲವು “ಸಣ್ಣ ಪುಟ್ಟ ವ್ಯತ್ಯಾಸಗಳಿದ್ದರೂ ಮೂಲ ಸ್ವಭಾವ ಸ್ವರೂಪದ ದೃಷ್ಟಿಯಿಂದ ಇಡೀ ಮಾನವ ಸಮುದಾಯದಲ್ಲಿ ಯಾವ ಭೇದವೂ ಇಲ್ಲ. ಒಂದು ದೇಶಕ್ಕೆ ಕಲ್ಯಾಣಕಾರಿಯಾಗುವ ಶಾಸನ ವಿಧಾನ ಹಾಗೂ ಸಾಮಾಜಿಕ ವ್ಯವಸ್ಥೆಗಳು ಇತರ ದೇಶಗಳಿಗೂ ಹಿತಕಾರಿಯೇ ಆಗುತ್ತವೆ”[5] ಮಾನವತಾವಾದ ಇದು ಸಮಸ್ತ ಮಾನವ ಕುಲಕ್ಕೆ ಅನ್ವಯಿಸುವಂತಹ

ಸಿದ್ಧಾಂತ. 'ಮಾನವತಾವಾದ' ಎಂಬ ಪದ ಇಂಗ್ಲೀಷನ 'Humanism' ಪದಕ್ಕೆ ಸಂವಾದಿಯಾಗಿ ಬಂದಿದೆ. ಈ ಪದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕ್ರಿ.ಶ.ಪೂ. 1ನೆಯ ಶತಮಾನದಲ್ಲಿ ಹುಟ್ಟಿ ಪುನರುಜ್ಜೀವನ ಯುಗವೆಂದು ಕರೆಯಲ್ಪಡುವ "ಕ್ರಿ. ಶ. 14–15ನೆಯ ಶತಮಾನದಲ್ಲಿ ಯುರೋಪಿನ ಐತಿಹಾಸಿಕ ಚಳುವಳಿಯಾಗಿ ಬೆಳೆಯಿತು. ಸಂಸ್ಕೃತಿಯ ಪುನರುಜ್ಜೀವನವೆಂದು ಹೆಸರಾದ ಈ ಚಳುವಳಿಯ ಮುಖ್ಯ ಕೇಂದ್ರಬಿಂದು ಮಾನವನೇ."[6] ಮಾನವತಾವಾದವನ್ನು The New Encyclopedia Britanica ವ್ಯಕ್ತಪಡಿಸಿದ ಅಭಿಪ್ರಾಯ ಇಂತಿದೆ. "Humanism an attitude of mind attaching prime importance to man and human values often regarded as the central theme of Renaissance Civilization"[7] ಆದರೆ ಪೌರ್ವಾತ್ಯ ರಾಷ್ಟ್ರಗಳಲ್ಲಿ ಅದರಲ್ಲೂ ವಿಶೇಷವಾಗಿ ಭಾರತದಲ್ಲಿ ಮಾನವತಾವಾದದ ಬಗ್ಗೆ ಪ್ರತ್ಯೇಕವಾದ ಚಿಂತನೆ ನಡೆಯದಿದ್ದರೂ, ಮಾನವನ ಕಲ್ಯಾಣವನ್ನೇ ಬಯಸುವ ಅನೇಕ ಚಿಂತನಾ ಪ್ರವಾಹಗಳು ಉಪನಿಷತ್ತುಗಳ ಕಾಲದಿಂದ ಬೆಳೆದು ಬಂದಿವೆ. ಭಗ್ವದ್ಗೀತೆ, ಬೌದ್ಧ, ಜೈನ, ಚಾರ್ವಾಕ ಮತಗಳಲ್ಲಿ, ಕನ್ನಡದಲ್ಲಿ ಹನ್ನೆರಡನೆಯ ಶತಮಾನದ ವಚನ ಚಳುವಳಿಯಲ್ಲಿ ನಂತರ ಬರುವ ದಾಸಸಾಹಿತ್ಯ, ಹೊಸಗನ್ನಡ ಸಾಹಿತ್ಯ ಮೊದಲಾದವುಗಳಲ್ಲಿ ಮಾನವತಾವಾದದ ವಿಚಾರಧಾರೆಯನ್ನು ಕಾಣುತ್ತೇವೆ.

ಭಾರತದಲ್ಲಿ ಮಾನವತಾವಾದ ಧರ್ಮದ ಭಾಗವಾಗಿ ಬೆಳೆಯಿತೇ ಹೊರತು ಪಾಶ್ಚಾತ್ಯ ರಾಷ್ಟ್ರಗಳಲ್ಲಿರುವಂತೆ ಅದೊಂದು ಪ್ರತ್ಯೇಕವಾದ ವೈಚಾರಿಕ ಸಿದ್ಧಾಂತವಾಗಿ ಬೆಳೆಯಲಿಲ್ಲ. ಅದಕ್ಕಾಗಿ ಮಾನವತಾವಾದದ ಅರ್ಥ ಹುಡುಕಲು ಪಾಶ್ಚಾತ್ಯ ಪದಕೋಶ ಹಾಗೂ ವಿಶ್ವಕೋಶಗಳನ್ನು ಅವಲಂಬಿಸಬೇಕಾಗುತ್ತದೆ. ಯಾವುದೇ ಒಂದು ಪದದ ಅರ್ಥ ಹುಡುಕಬೇಕಾದರೆ ಆ ಪದದ ಹುಟ್ಟು ಮತ್ತು ಬಳಕೆಯ ಸಂದರ್ಭ, ಸನ್ನಿವೇಶಗಳನ್ನು ಅರಿಯುವುದು ಅಗತ್ಯ. ಹೀಗಾಗಿ ಮಾನವತಾವಾದ ಪದದ ಅರ್ಥೈಸುವಿಕೆ ನಡೆಯಬೇಕಾದದ್ದು. ಪಾಶ್ಚಾತ್ಯ ಸಾಹಿತ್ಯ ಮತ್ತು ತತ್ವಜ್ಞಾನಗಳ ಪರಿಧಿಯಲ್ಲಿಯೇ. ಆದ್ದರಿಂದ ಮಾನವತಾವಾದ (Humanism) ಪದದ ವಿಸ್ತೃತ ಅರ್ಥವನ್ನು ಪಾಶ್ಚಾತ್ಯ ತಾತ್ವಿಕ ಸಾಹಿತ್ಯ ಸಂದರ್ಭಗಳಲ್ಲಿ ಹುಡುಕುವುದು ಅನಿವಾರ್ಯವಾಗಿದೆ.

ಮಾನವತಾವಾದದ ಕುರಿತು ಅರ್ಥಕೋಶಗಳು ಹಲವಾರು ಅರ್ಥಗಳನ್ನು ನೀಡಿದ್ದರೂ ಅವುಗಳ ಗುರಿ ಒಂದೇ ಆಗಿದೆ. ಮಾನವತಾವಾದವೆಂದರೆ ಮಾನವನ ಕುರಿತಾದ ಚಿಂತನೆ. ಮಾನವನ ಶ್ರೇಷ್ಠತೆಯನ್ನು ಎತ್ತಿ ಹಿಡಿಯುವುದಾಗಿದೆ ಎಂದು ಅವು ಅರ್ಥೈಸುತ್ತವೆ.

## 2. ಮಾನವತಾವಾದ (Humanism) ಪದದ ಉಗಮ

'Humanism' (ಹ್ಯೂಮನಿಸಂ) ಎಂಬ ಪದವು ಲ್ಯಾಟಿನ್ ಶಬ್ದ. ಇದು 'ಹ್ಯೂಮನ್ಸ್'ದಿಂದ ಬಂದಿದೆ. ಹ್ಯೂಮನ್ಸ್ ಎಂದರೆ ಮಾನವೀಯ ವ್ಯವಹಾರಗಳಿಗೆ ಸಂಬಂಧಪಟ್ಟ ಸಾಮಾನ್ಯ ವಿಚಾರಗಳ ವ್ಯವಸ್ಥೆ, ಎಂದು ತಿಳಿಯಲಾಗುವುದು. 'Humanism' ಪದವು Humanise – Humane ಎಂಬ ಪದಗಳಿಂದ ಬಂದಿದೆ."[8] Humane ಎಂದರೆ ಸಂಸ್ಕೃತಿ ಸಂಪನ್ನ, ಸುರಚಿ ಸಂಪನ್ನ, ಕರುಣಾಳು ಎಂಬ ಅರ್ಥಗಳಿವೆ. ದಾನವ ಪ್ರವತ್ತಿಗಳನ್ನು ಹತ್ತಿಕ್ಕಿ, ಮಾನವ ಪ್ರವೃತ್ತಿಗಳಿಗೆ ಇಂಬು ಕೊಡುವುದೇ ಸಂಸ್ಕೃತೀಕರಣ. ಅದೇ

Vol. 1, Issue: 1, April: 2013 (IJRSML) ISSN: 2321 - 2853

ಮಾನವೀಕರ (Humanise) ಈ Humanise ಪದದಿಂದ ವಿಸ್ತೃತವಾಗಿ 'Humanism' ಪದ ಬೆಳೆಯಿತು. ಈ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ 'ಮಾನವತಾವಾದ' ಎಂಬ ಪದ ಹುಟ್ಟಿಕೊಂಡಿತು. "19ನೆಯ ಶತಮಾನದಲ್ಲಿ 'ಹ್ಯೂಮನಿಸಂ' ಪದ ಹೊಸದಾಗಿ ಸೃಷ್ಟಿಯಾಯಿತು. ಇದು ವಿಶ್ವದಲ್ಲಿ ಮನುಷ್ಯನಿಗಿರುವ ಸ್ಥಾನ ಮತ್ತು ಔನ್ನತ್ಯಗಳನ್ನು ಗುರುತಿಸುತ್ತದೆ."[9] ಅಂದರೆ ಮನುಷ್ಯನಿಗೆ ಮಹತ್ವವನ್ನು ನೀಡಿ, ಅವನೇ ಮೊದಲು ನಂತರ ಉಳಿದದ್ದೆಲ್ಲ ಎಂದು ಭಾವಿಸುತ್ತದೆ.

"ಮಾನವತಾವಾದ ಎಂದರೆ ಕರುಣಾಳು, ದಯಾಳು, ಕೃಪಾಳು, ಮಾನವೋಚಿತ, ಸಹೃದಯ, ಸಾಂಸ್ಕೃತಿಕ ಸಂಪನ್ನ ಗುಣಗಳನ್ನು ರೂಢಿಸಿಕೊಂಡ ಮನುಷ್ಯತ್ವದ ಸಂಸ್ಕೃತ ಸ್ವಭಾವದ ದರ್ಶನ, ಅಲ್ಲದೆ ಈ ತೆರನಾದ ಮನುಷ್ಯತ್ವವನ್ನು ರೂಢಿಸುವ, ಮನುಷ್ಯತ್ವವನ್ನು ಎತ್ತಿ ಹಿಡಿಯುವ, ಮಾನವ ಕಲ್ಯಾಣವನ್ನು ಬಯಸುವ ವಾದ"[10] ಮಾನವತಾವಾದವನ್ನು ಮಾನವವಾದ ಎಂದೂ ಕೂಡ ಕರೆಯುತ್ತಾರೆ. ಈ ಮಾನವವಾದ 'came from the phrase studia humanitatis or humaniora the liberal arts or humane studies, a concept derived largely from cicero'[11] ಎಂದು ಹಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. 'ಹ್ಯೂಮನಿಸಂ' ಪದದ ಉಗಮ ಯಾವುದೇ ಆಗಿರಲಿ. ಅದರ ಉದ್ದೇಶ ಮಾನವನ ಶ್ರೇಷ್ಠತ್ವವನ್ನು ಎತ್ತಿ ಹಿಡಿಯುವುದು ಮತ್ತು ಮಾನವನ ಕಲ್ಯಾಣ ಮಾಡುವುದಾಗಿದೆ. ಇದರಲ್ಲಿ ಮಾನವನ ಘನತೆಯ ಪ್ರಶ್ನೆ ಕೂಡ ಅಡಗಿದೆ. ಹಾಗಾಗಿ ಅದನ್ನು ಎತ್ತರಿಸುವ ಮಾನವೀಯ ಗುಣಗಳ–ಮೌಲ್ಯಗಳ ಹುಡುಕಾಟವೂ ಇಲ್ಲಿ ಪ್ರಧಾನವಾಗುತ್ತದೆ.

## 3. ಮಾನವತಾವಾದದ ಅರ್ಥ

ಮಾನವತಾವಾದ ಒಂದು ವ್ಯಾಪಕವಾದ ವಿಸ್ತೃತವಾದ ಪರಿಕಲ್ಪನೆಯಾಗಿದೆ. ಸಾಮಾನ್ಯವಾಗಿ ಮಾನವತಾವಾದ ಎಂದರೇನು? ಎಂಬುದರ ಬಗ್ಗೆ ಖಚಿತವಾದ, ಸಂಕ್ಷಿಪ್ತವಾದ ವ್ಯಾಖ್ಯೆಗಳನ್ನು ನೀಡುವುದು ಕಷ್ಟ, ಮಾನವತಾವಾದ ಮಾನವನ ಅನಿರ್ಬಂಧಿತ ಬೆಳವಣಿಗೆ, ಸುಖ–ಸಂತೋಷ, ಗೌರವಗಳನ್ನು ಆಧರಿಸಿದ, ಐತಿಹಾಸಿಕವಾಗಿ ಬದಲಾಗುತ್ತಿರುವ ಒಂದು ಪದ್ಧತಿ. ಆದ್ದರಿಂದ ಮಾನವತಾವಾದವನ್ನು ಆಯಾ ಸಂದರ್ಭದ ಹಿನ್ನೆಲೆಯಲ್ಲಿ ಅರ್ಥೈಸಬೇಕಾಗುತ್ತದೆ. ಮಾನವನ ಚಿಂತನೆಯೇ ಮುಖ್ಯ ಆದರ್ಶವಾಗಿರುವ ಯಾವುದೇ ತತ್ವ ಮಾನವತಾವಾದ ಎಂದು ಸಾಮಾನ್ಯವಾಗಿ ಹೇಳಬಹುದು. "ಮನುಷ್ಯತ್ವ ಅಥವಾ ಮಾನವೀಯತೆಯೇ ಶ್ರೇಷ್ಠವೆಂದು ಹೇಳುವ ಸಿದ್ಧಾಂತವೇ ಮಾನವತಾವಾದ"[12] ಮಾನವನ ಅನನ್ಯತೆಯ ಬಗೆಗೆ ಅವನು ತಾಳಿರುವ ವಿಶ್ವಾಸದ ನಿಲುವೇ ಮಾನವತಾವಾದ. ಮಾನವ ಕೈಗೊಂಡ ಮನುಕುಲದ ವಿಕಾಸಾತ್ಮಕ ಚಿಂತನೆಯೇ ಮಾನವತಾವಾದ. 'Humanism is also associated with the Renaissance. When it denoted a move away from God to man as the centre of interest. God still remained as creator and Supreme athority - the Renaissance humanists were far from being atheists but his activity was seen as less immediate, more as general control than as day-to-day interference and this enabled a scientific out look to arise which saw the universe as governed by general laws albeit these were laid down by God'[13] ಈ ಮೇಲಿನ ವಿಚಾರವನ್ನು ಗಮನಿಸಿದಾಗ ಮಾನವನೇ ಶ್ರೇಷ್ಠ ಎಂಬುದು ತಿಳಿಯುತ್ತದೆ. ಇದಕ್ಕೆ ಪುಷ್ಟಿ ನೀಡುವ ರೀತಿಯಲ್ಲಿ ಗೌರೀಶ

ಕಾಯ್ಕಿಣಿಯವರು. "ಮನುಷ್ಯತ್ವಕ್ಕಿಂತಲೂ ಶ್ರೇಷ್ಠವಾದದ್ದು ಯಾವುದು ಇಲ್ಲ"[14] ಎಂದಿದ್ದಾರೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮಾನವತಾವಾದದ ಚಿಂತನೆಯು ವಿಶಿಷ್ಟವಾಗಿದೆ. ಪಾಶ್ಚಾತ್ಯರು ಮಾನವನ ಶ್ರೇಷ್ಠತೆಯನ್ನು ಆತನ ಪ್ರಯತ್ನ ಮತ್ತು ಪರಿಶ್ರಮಗಳಲ್ಲಿ ಕಂಡುಕೊಳ್ಳುತ್ತಾರೆ. ಮಾನವನು ಸ್ವತಂತ್ರ ಹಾಗೂ ಹಲವಾರು ಆಶೆ–ಆಕಾಂಕ್ಷೆಗಳಿಂದ ಕೂಡಿದ ವ್ಯಕ್ತಿ ಎಂಬಂತೆ ಚಿತ್ರಿಸಲಾಗಿದೆ. ಏಕೆಂದರೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಜೀವನದ ಅಂತಿಮ ಗುರಿಯನ್ನು ಭೋಗವಾದದಲ್ಲಿ ಕಾಣುತ್ತೇವೆ. ಅದು ಭಾರತೀಯರಂತೆ ಆಧ್ಯಾತ್ಮ ಹಾಗೂ ಮೋಕ್ಷದ ಗುರಿಯನ್ನು ಹೊಂದಿಲ್ಲ.

ಮಾನವತಾವಾದದ ಪರಂಪರಾಗತವಾದ ಅರ್ಥ, ಕಲ್ಪನೆ ಮತ್ತು ವ್ಯಾಪ್ತಿಗಳನ್ನು ಮೀರಿದ ವಿಭಿನ್ನ ವ್ಯಾಖ್ಯೆಗಳು ಕಾಲಾಂತರದಲ್ಲಿ ಬೆಳೆದು ಬಂದಿವೆ. ಅಂದರೆ ಮಾನವತಾವಾದದ ಮೂಲ ಕಲ್ಪನೆಯನ್ನು ಮೀರಿ ಅದರಾಚೆಗಿನ ಆಯಾಮಗಳನ್ನು ಗುರುತಿಸಲಾಗಿದೆ. ಇಟಲಿ, ಅಮೇರಿಕಾ ಮೊದಲಾದ ರಾಷ್ಟ್ರಗಳಲ್ಲಿ ಮಾನವತಾವಾದವೆಂದರೆ ಮಾನವನ ಶ್ರೇಷ್ಠತೆಯನ್ನು ಎತ್ತಿ ಹಿಡಿಯುವ ಮಾನವಕೇಂದ್ರಿತ ಚಿಂತನೆಯೊಂದಿಗೆ ಅದರ ಅಧ್ಯಯನಗಳ ಚಳುವಳಿಯೆಂಬ ಸಂಕುಚಿತಾರ್ಥವನ್ನು ಕಲ್ಪಿಸಲಾಗಿದೆ. "ಪಾಶ್ಚಾತ್ಯ ರಾಷ್ಟ್ರಗಳಲ್ಲಿ 14–15 ನೆಯ ಶತಮಾನಗಳಲ್ಲಿ ನಡೆದ ಪುನರುಜ್ಜೀವನ ಯುಗದ ಚಳುವಳಿಯ ಫಲವಾಗಿ ಹರಡಿದ ಕೇವಲ ಮತೀಯವೆನ್ನಬಹುದಾದ ವ್ಯಾಸಂಗ ವಿಚಾರಗಳಿಂದ ಭಿನ್ನವಾದ ಕ್ಲಾಸಿಕಲ್ ಪಾಂಡಿತ್ಯದ ಪುನರುಜ್ಜೀವನ ಚಳುವಳಿಗೆ ಮಾನವತಾವಾದ ಎನ್ನಲಾಗುತ್ತದೆ. ಅಂದರೆ ಪ್ರಾಚೀನ ರೋಮನ್ ಮತ್ತು ಗ್ರೀಕ್ ಸಾಹಿತ್ಯದ ಉತ್ಕೃಷ್ಟ ಕೃತಿಗಳನ್ನು ಅಧ್ಯಯನ ಮಾಡುವುದರೊಂದಿಗೆ ಆ ಕೃತಿಗಳಲ್ಲಿ ವೈಭವೀಕೃತವಾದ ಮನುಷ್ಯನ ಮಾದರಿಯಲ್ಲಿಯೇ ಮನುಷ್ಯನನ್ನು ನಿರ್ಮಾಣ ಮಾಡುವ ಬೌದ್ಧಿಕ, ಸಾಂಸ್ಕೃತಿಕ, ಶೈಕ್ಷಣಿಕ ಕಾರ್ಯಕ್ರಮವಾಗಿತ್ತು. ಅಲ್ಲದೆ ವೃತ್ತಿಶಿಕ್ಷಣದ ಮೇಲೆ ಅತಿಯಾದ ಒತ್ತು ಹಾಕುವುದನ್ನು ವಿರೋಧಿಸಿ, ಶಾಸ್ತ್ರೀಯ ಮಾದರಿಯ ಉದಾರ ಶಿಕ್ಷಣಕ್ಕೆ ಹಿಂದಿರುಗಬೇಕೆಂದು ವಾದಿಸುವ ಈ ವಾದ ಮೊದಲು ಇಟಲಿಯಲ್ಲಿ ಹುಟ್ಟಿ ನಂತರ ಅಮೇರಿಕಾ, ಇಂಗ್ಲೆಂಡ್ ಮೊದಲಾದ ಐರೋಪ್ಯ ರಾಷ್ಟ್ರಗಳಲ್ಲೆಲ್ಲ ಹರಡಿತು."[15] ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಬೆಳೆದು ಬಂದ ಮಾನವತಾವಾದ ವಿಶೇಷವಾಗಿ ಮಾನವಿಕಗಳ ಅಧ್ಯಯನವನ್ನೊಳಗೊಂಡ ಚಳುವಳಿಯ ರೂಪದ ಮಾನವತಾವಾದ. ಮಾನವಿಕಗಳೆಂದರೆ ಮಾನವನಲ್ಲಿರುವ ಮೂಲ ಪ್ರವೃತ್ತಿಗಳನ್ನು ಮಾರ್ಪಡಿಸಿ ಅವನ ಹೃದಯ ಸಂಸ್ಕಾರಕ್ಕೆ ವ್ಯಕ್ತಿತ್ವ ವಿಕಾಸಕ್ಕೆ ನೆರವಾಗಬಲ್ಲ ಭೌತ ಹಾಗೂ ಸಮಾಜ ವಿಜ್ಞಾನಗಳಿಗೆ ಭಿನ್ನವಾದ ಭಾಷೆ, ಸಾಹಿತ್ಯ, ಕಲೆ, ತತ್ವಶಾಸ್ತ್ರ, ಶಿಕ್ಷಣ ಮೊದಲಾದ ಸಾಂಸ್ಕೃತಿಕ ವ್ಯಾಸಂಗ ವಿಷಯಗಳೇ ಮಾನವೀಯ ವಿದ್ಯೆಗಳು ಅಥವಾ ಮಾನವಿಕ ಶಾಸ್ತ್ರ (ಊಣಜಚಿಟಿಣಥಿ)ಗಳೆಂದು ಕರೆಯುವರು. "ಮನುಷ್ಯನ ಕಲ್ಪನೆ, ಪ್ರತಿಭೆಗಳಿಗೆ ನಿಕಟವಾಗಿ ಸಂಬಂಧ ಪಡೆದ ಗಣಿತ, ಜೀವವಿಜ್ಞಾನ ಮುಂತಾದವುಗಳನ್ನು ಜೈವಿಕವೆಂದು, ವ್ಯಾಕರಣ, ಅಲಂಕಾರಶಾಸ್ತ್ರ, ಚರಿತ್ರೆ, ಕಾವ್ಯ, ತತ್ವಶಾಸ್ತ್ರಗಳನ್ನು ಮಾನವಿಕಶಾಸ್ತ್ರಗಳೆಂದು ಕರೆಯುತ್ತಿದ್ದರು."[16] ಮಧ್ಯಯುಗದಲ್ಲಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮಾನವಿಕಗಳನ್ನು ಕುರಿತು ಅಧ್ಯಯನ ಮಾಡುವ ವಿದ್ಯಾರ್ಥಿಗಳನ್ನು ಸ್ಥೂಲವಾಗಿ ಮಾನವತಾವಾದಿಗಳೆಂದು ಕರೆಯಲಾಗುತ್ತಿತ್ತು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮಾನವತಾವಾದದ ಅಂಕುರವನ್ನು ಪ್ರೊಟ್ಯಾಗೊರಸ್, ಸಾಕ್ರೆಟಸ್, ಪ್ಲೇಟೋ, ಅರಿಸ್ಟಾಟಲ್, ಸಿಸಿರೋ ಮುಂತಾದ ತತ್ವಜ್ಞಾನಿಗಳಲ್ಲಿ ಕಾಣಬಹುದು. ಇದೇ ಸಂದರ್ಭದಲ್ಲಿ "ಮಾನವತಾವಾದ ಧರ್ಮವು ನಿರ್ದಿಷ್ಟವಾಗಿ ಯಾವುದೇ ದೇವರನ್ನು ಕುರಿತು ನಂಬಿಕೆಗೆ ಕಟ್ಟು ಬೀಳಬೇಕಾಗಿಲ್ಲವೆಂದು ಸೂಚಿಸುವ ಒಂದು ಧಾರ್ಮಿಕ ಶಬ್ದ"[17] ಎಂದು ಹೇಳಲಾಗಿದೆ. ಪುನರುಜ್ಜೀವನ

(Renaissaance) ಚಳುವಳಿಯ ಸಂದರ್ಭದಲ್ಲಿನ ಮಾನವತಾವಾದವು ಧರ್ಮವನ್ನು ಸಂಪೂರ್ಣವಾಗಿ ತನ್ನ ವಲಯದಿಂದ ಹೊರಗಿರಿಸಿದ ನಿರೀಶ್ವರವಾದಿ ನಿಲುವಿನ ಧರ್ಮನಿರಪೇಕ್ಷ ಮಾನವತಾವಾದವಾಗಿದೆ. ಮಾನವತಾವಾದ ಚಿಂತನೆ ದೈವಕೇಂದ್ರಿತ ನೆಲೆಯಿಂದ ವ್ಯಕ್ತಿಕೇಂದ್ರಿತ ನೆಲೆಗೆ ಮತ್ತು ವ್ಯಕ್ತಿಕೇಂದ್ರಿತ ನೆಲೆಯಿಂದ ವ್ಯಕ್ತಿಸೇವೆಯ ನೆಲೆಗೆ ಹರಿದು ಬಂದಿದೆ.

ಮಾನವ ತೀರ ಹಳಬ; ಮಾನವತೆ ಕೂಡ ಅವನಷ್ಟೇ ಹಳೆಯ ಸಂಗತಿ. ಸೃಷ್ಟಿಯಲ್ಲಿ ಮಾನವ ಶ್ರೇಷ್ಠತೆಯನ್ನು ಪ್ರಾಚೀನ ಕಾಲದಿಂದಲೂ ಒಪ್ಪಿಕೊಂಡು ಬಂದವನೂ ಮಾನವನೇ. ಮಾನವತಾವಾದದ ಕಾರ್ಯವ್ಯಾಪ್ತಿಯನ್ನರಿತ ವಿದ್ವಾಂಸರು ಹೀಗೆ ಅಭಿಪ್ರಾಯಪಡುತ್ತಾರೆ. "ಮಾನವೀಯ ಅನುಕಂಪ, ಸಹಾನುಭೂತಿ, ಜಾತಿ, ಮತ, ಪಂಥ, ಉಚ್ಚ–ನೀಚಗಳೆಂಬ ಭೇದಗಳನ್ನು ಮೀರಿದ ಮನುಷ್ಯತ್ವದ ಸಾಮಯಿಕ ಭಾವನೆ ಎಂಬರ್ಥದ ಮಾನವೀಯತೆಯನ್ನು ಮೀರಿದ ತಾತ್ವಿಕ ತಾತ್ಪರ್ಯದ ಪರಿಕಲ್ಪನೆಯೇ ಮಾನವತಾವಾದ."[18] ಮಾನವತಾವಾದವು ಅನೇಕ ತತ್ವಗಳಿಗೆ ಹಾಗೂ ವಾದಗಳಿಗೆ ಪ್ರೇರಣೆಯನ್ನು, ಪುಷ್ಠಿಯನ್ನು ನೀಡಿದೆ. ಇದರ ಸ್ವೀಕರಣೆ ಮತ್ತು ನಿರಾಕರಣೆಯಲ್ಲಿ ಅನೇಕ ತತ್ವವಾದಗಳ ಧೋರಣೆಗಳು ರೂಪದಾಳಿವೆ. ತತ್ವಜ್ಞಾನಿಗಳು ಇತಿಹಾಸ, ಸಂಸ್ಕೃತಿ ಹಾಗೂ ನಾಗರೀಕತೆಗಳಿಗೆ ಮಾನವನೇ ಮೂಲವೆಂದು ಭಾವಿಸಿದ್ದಾರೆ. ಹಾಗೂ ಮಾನವನ ಶ್ರೇಷ್ಠತೆಯನ್ನು ಎತ್ತಿ ಹಿಡಿಯುವ ನಿಟ್ಟಿನಲ್ಲಿಯೇ ಇದರ ಗುರಿಯನ್ನು ಕೇಂದ್ರಿಕರಿಸಿದ್ದಾರೆ. 'ಮಾನವತಾವಾದ' ಎಂಬ ಪದವನ್ನು ವಿಶಾಲಾರ್ಥದಲ್ಲಿ ಅಪಾರವಾದ ಅನುಕಂಪವುಳ್ಳ, ಕಾರುಣ್ಯಭರಿತವಾದ, ಲೋಕೋಪಕಾರವುಳ್ಳ, ನಿಸ್ವಾರ್ಥಪೂರ್ಣವಾದ ಮಾನವ ಸೇವೆ ಎಂಬಂರ್ಥದಲ್ಲಿ ಬಳಸಲಾಗಿದೆ.

ಮಾನವತಾವಾದ ಸರ್ವದೇಶಗಳಲ್ಲೂ, ಸರ್ವಕಾಲಗಳಲ್ಲೂ, ಸರ್ವಜನಾಂಗಗಳಿಗೂ ಸಾಮೂಹಿಕ ಹಿತವನ್ನು ಬಯಸುವ ಸಿದ್ಧಾಂತ. "ಮಾನವತಾವಾದವು ಮಾನವರನ್ನೆಲ್ಲಾ ಸಮಾನವಾಗಿ ಪರಿಗಣಿಸುವ ಪ್ರಜಾಪ್ರಭುತ್ವದತ್ತ ಹೆಚ್ಚು ವಾಲುತ್ತದೆ."[19] ಜಗತ್ತಿನಲ್ಲಿ ಅನೇಕ ಅದ್ಭುತ ಶಕ್ತಿಗಳಿವೆ ಹಾಗೂ ಆಶ್ಚರ್ಯಗಳಿವೆ. ಆದರೆ ಅವೆಲ್ಲವುಗಳಿಗಿಂತ ಮಿಗಿಲಾದ ಆಶ್ಚರ್ಯವೆಂದರೆ ಮಾನವ. ಎಲ್ಲಕ್ಕಿಂತ ಅದ್ಭುತ ಶಕ್ತಿಯೆಂದರೆ ಮಾನವೀಯತೆ. ಮಾನವನಿಲ್ಲದಿದ್ದರೆ ಪ್ರಪಂಚವೆಲ್ಲ ಶೂನ್ಯ. ಮಾನವೀಯ ಸಂಬಂಧಗಳು ಹೆಚ್ಚಾದಂತೆ ಮಾನವೀಯತೆ ಮನುಷ್ಯನ ಹೃದಯದಲ್ಲಿ ಜಾಗೃತಗೊಳ್ಳುತ್ತ ಹೋಗುತ್ತದೆ. ಈ ಮಾನವೀಯತೆ ಜಾಗೃತವಾದಂತೆ ಮಾನವತಾವಾದದ ವ್ಯಾಪ್ತಿ ವ್ಯಾಪಕಗೊಳ್ಳುತ್ತ ಸಾಗುತ್ತದೆ.

## 4. ಮಾನವತಾವಾದದ ವ್ಯಾಪ್ತಿ

ಮಾನವನ ಕಲ್ಯಾಣ ಸಾಧನೆ ಮಾನವತಾವಾದದ ಮುಖ್ಯ ಗುರಿಯಾದ್ದರಿಂದ, ಮಾನವ ನಿರ್ಮಿತ ಸಂಘ–ಸಂಸ್ಥೆ, ರಾಷ್ಟ್ರ ಮತ್ತು ಇಡೀ ಜಗತ್ತು ಇದರ ಚರ್ಚೆಯ ವ್ಯಾಪ್ತಿಯಲ್ಲಿ ಬರುತ್ತದೆ. ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತದಲ್ಲಿ ಯಾವುದೇ ವ್ಯಕ್ತಿಯ ಜೀವನ ಹಾಗೂ ಸ್ವಾತಂತ್ರ್ಯವನ್ನು ಕಾಪಾಡುವಾಗ ವ್ಯಕ್ತಿಯ ಘನತೆಯನ್ನು ಗೌರವಿಸುವುದು ನಮ್ಮ ಸಂವಿಧಾನ ಹಾಗೂ ಅಂತರ್‌ರಾಷ್ಟ್ರೀಯ ಮಾನವ ಹಕ್ಕುಗಳ ಒಡಂಬಡಿಕೆಯ ಮುಖ್ಯ ತತ್ವವಾಗಿದೆ. ಭಾರತೀಯ ಸಂವಿಧಾನ 51 ಎ(ಎಚ್) ಕಲಂ ಸಹ ಮಾನವತಾವಾದಕ್ಕೆ ಮಹತ್ವ ನೀಡಿದೆ. ನಿರಂಕುಶವನ್ನು ಸಂಪೂರ್ಣವಾಗಿ ವಿರೋಧಿಸಿ ಮಾನವತಾವಾದ ಪ್ರಜಾಪ್ರಭುತ್ವಕ್ಕೆ ಹೆಚ್ಚು ಮಹತ್ವ

ನೀಡುತ್ತದೆ ಮತ್ತು ಮಾನವರೆಲ್ಲ ಸಮಾನವೆಂದು ಪರಿಗಣಿಸುತ್ತದೆ. ಪ್ರಯೋಗಾಲಯದಲ್ಲಿ ಪ್ರಾಣಿಗಳನ್ನು ಕತ್ತರಿಸುವುದನ್ನು ವಿರೋಧಿಸುವುದರಿಂದ ಹಿಡಿದು ಸಮಾಜವಾದದವರೆಗೆ ಅನೇಕ ಚಳುವಳಿಗಳಲ್ಲಿ ವ್ಯಾಪಿಸಿದೆ.

"ಕ್ರಿ.ಶ. 1300 ರಲ್ಲಿ ಇಟಲಿಯಲ್ಲಿ ಪ್ರಾರಂಭವಾದ ಮಾನವತಾವಾದ ಚಳುವಳಿ ಫ್ರಾನ್ಸ್, ಜರ್ಮನ್, ನೆದರ್‌ಲ್ಯಾಂಡ್, ಇಂಗ್ಲೆಂಡಗಳಲ್ಲಿ ಹರಡಿತಲ್ಲದೆ, ಕ್ರಿ.ಶ. 1500 ರ ವೇಳೆಗೆ ಮಾನವತಾವಾದ ಅಂತರ್‌ರಾಷ್ಟ್ರೀಯ ವಿದ್ವಾಂಸರ ಸಹಚರ್ಯವಾಯಿತು."[20] ಪಾಶ್ಚಾತ್ಯ ರಾಷ್ಟ್ರಗಳಲ್ಲಿ ದೈವ ಚಿಂತನೆಯನ್ನಳಿದು ಮಾನವ ಕೇಂದ್ರಿತ ಚಿಂತನೆಗೆ ತೊಡಗಿದ ಸಂದರ್ಭವೇ ಮಾನವತಾವಾದದ ಅವಿರ್ಭಾವಕ್ಕೆ ಮುನ್ನುಡಿಯಾಯಿತು. ಮಾನವತಾವಾದದ ಹುಟ್ಟನ್ನು ಪಾಶ್ಚಾತ್ಯ ಚಿಂತಕರಾದ ಪ್ರೊಟ್ಯಾಗೋರಸ್, ಸಾಕ್ರೆಟಸ್, ಪ್ಲೇಟೋ ಮುಂತಾದವರು ಕ್ರಿ.ಶ. 14–15ನೆಯ ಶತಮಾನದ ಪುನರುತ್ಥಾನ ಯುಗಕ್ಕೆ ಬದ್ಧಗೊಳಿಸಿದ್ದಾರೆ. "ಭಾರತದಲ್ಲಿ ಮಾನವತಾವಾದವನ್ನು ಋಷಿ ಮುನಿಗಳ ಕಾಲದಿಂದ ಮಹಾತ್ಮಾಗಾಂಧಿ, ಡಾ.ಬಾಬಾಸಾಹೇಬ ಅಂಬೇಡ್ಕರರವರೆಗೆ ಗುರುತಿಸಬಹುದಾಗಿದೆ. ಮಾನವನ ಹಿರಿಮೆಯನ್ನು ಎತ್ತಿ ಹಿಡಿದು ಮಾನವತೆಗೆ ಹೆಚ್ಚು ಗೌರವ ತೋರಿದ ದೇಶಗಳಲ್ಲಿ ಭಾರತವು ಒಂದು."[21] ಕ್ರಿ.ಶ. 14–15ನೆಯ ಶತಮಾನದಲ್ಲಿ ಪಾಶ್ಚಾತ್ಯರಲ್ಲಿ ಮಾನವತಾವಾದವೆಂದರೆ ಅಂದಿನ ಸಂದರ್ಭದಲ್ಲಿ ಅವರ ದೃಷ್ಟಿಯಲ್ಲಿ ಕೇವಲ ಮಾನವಿಕ ಅಧ್ಯಯನ ಎಂಬ ಅಭಿಪ್ರಾಯವಿತ್ತು. ಆದರೆ ಆಗಸ್ಟ ಕೋಮ್ಟನ ಕಾಲದಲ್ಲಿ ಅದು ಮಾನವಕೇಂದ್ರಿತ ಚಿಂತನೆ, ಮಾನವನ ಗೌರವವನ್ನು ಎತ್ತಿ ಹಿಡಿಯುವ ಮತ್ತು ಮಾನವನ ಕಲ್ಯಾಣ ಎಂಬ ಅರ್ಥವನ್ನು ಪಡೆಯಿತು.

ಭಾರತೀಯ ಸಾಹಿತ್ಯ ಇತಿಹಾಸದಲ್ಲಿ ಮಾನವತಾವಾದ ಚಿಂತನೆ ಉಪನಿಷತ್ತುಗಳ ಕಾಲದಿಂದ ಪ್ರಾರಂಭವಾಗಿದೆ. ಭಾರತೀಯರ ಮಾನವತಾವಾದ ಈಶ್ವರವಾದಿ ನಿಲುವಿನ ಮಾನವತಾವಾದ. ಉಪನಿಷತ್ತುಗಳ ತುಂಬೆಲ್ಲ ಮಾನವತಾವಾದದ ಅಂಶಗಳಿವೆ. ಕ್ರಿ.ಶ.ಪೂ. 4–5ನೆಯ ಶತಮಾನದಲ್ಲಿ ವೈದಿಕ ಧರ್ಮದ ಶೋಷಣೆಯ ವಿರುದ್ಧ ಜನ್ಮತಾಳಿದ ಜೈನ ಮತ್ತು ಬೌದ್ಧ ಧರ್ಮಗಳು ಮಾನವನ ಚಾರಿತ್ರ್ಯಕ್ಕೆ ಮಹತ್ವ ನೀಡಿದವು. ಆಧುನಿಕ ನಾಗರಿಕತೆಯ ದಾಳಿಗೆ ತುತ್ತಾದ ಸಾಮಾಜಿಕ ವ್ಯವಸ್ಥೆಯಲ್ಲಿನ ಪರಂಪರಾಗತ ನಂಬಿಕೆಗಳು ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡವು. ವೈಜ್ಞಾನಿಕತೆ ಮತ್ತು ವೈಚಾರಿಕತೆಯಿಂದ ಬದಲಾಗುತ್ತಿರುವ ಸನ್ನಿವೇಶಗಳಲ್ಲಿ ಅವು ತಮ್ಮ ಅರ್ಥವ್ಯಾಪ್ತಿಯನ್ನು ಮತ್ತು ಕಾರ್ಯವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳುತ್ತ ಹಾಗೂ ಕುಗ್ಗಿಸಿಕೊಳ್ಳುತ್ತ ಸಾಗಿರುತ್ತವೆ. ಒಟ್ಟಿನಲ್ಲಿ ಮಾನವನ ಜೀವನದಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತವೆ. ಈ ಮಾತು ಮಾನವತಾವಾದಕ್ಕೂ ಅನ್ವಯಿಸುತ್ತದೆ. ಪ್ರಾರಂಭದಲ್ಲಿ ದೇವರು ಹಾಗೂ ಧರ್ಮಕ್ಕಿಂತ ಮಾನವ ಶ್ರೇಷ್ಠವೆಂದು ಹೇಳಿದ ಮಾನವತಾವಾದ ನಂತರದ ಅವಧಿಯಲ್ಲಿ ಮಾನವ ಕಲ್ಯಾಣಕ್ಕೆ ಬದ್ಧವಾಯಿತು. ಇತ್ತೀಚೆಗೆ ಮಾನವತಾವಾದವೆಂದರೆ ಮಾನವ ಸೇವೆ ಎಂಬ ತರ್ಕವನ್ನು ಹೊಂದಿದೆ. ಅಷ್ಟೇ ಅಲ್ಲದೆ ಸಕಲ ಜೀವಿಗಳನ್ನು ದಯೆ, ಕರುಣೆ, ಸ್ನೇಹ, ಪ್ರೇಮ, ಅನುಕಂಪದಿಂದ ಕಾಣುವುದು ಎಂಬರ್ಥದಲ್ಲಿ ಬಳಸಲ್ಪಡುತ್ತದೆ.

ಆಧುನಿಕ ಮಾನವತಾವಾದ ಪ್ರಾಚೀನ ಮಾನವತಾವಾದಕ್ಕಿಂತ ಭಿನ್ನವಾದ ನಿಲುವುಗಳನ್ನು ಹೊಂದಿದೆ. ಈ ಭೂಮಿಯ ಮೇಲೆ ತನ್ನಂತೆಯೇ ಪರರಿಗೂ ಕ್ರಿಮಿಕೀಟಗಳಾದಿಯಾಗಿ ಪಶುಪಕ್ಷಿಗಳವರೆಗೆ ಎಲ್ಲ

ಜೀವಿಗಳಿಗೂ ಪ್ರಪಂಚದಲ್ಲಿ ಬದುಕುವ ಹಕ್ಕಿದೆ ಎಂಬುದು ಆಧುನಿಕ ಮಾನವೀಯತೆಯ ಅಂಶ. ಸುಮಾರು 12ನೆಯ ಶತಮಾನಗಳಷ್ಟು ಹಿಂದೆಯೇ ನಮ್ಮ ಶಿವಶರಣರು ಈ ಅಂಶದತ್ತ ಗಮನಹರಿಸಿರುವುದನ್ನು ಬಸವಣ್ಣನವರ ಈ ಕೆಳಗಿನ ವಚನದಿಂದ ಅರಿತುಕೊಳ್ಳಬಹುದು.

"ದಯವಿಲ್ಲದ ಧರ್ಮವದೇವುದಯ್ಯಾ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ
ದಯವೇ ಧರ್ಮದ ಮೂಲವಯ್ಯಾ"[22]

ಪಾಶ್ಚಾತ್ಯ ರಾಷ್ಟ್ರಗಳು 1789 ರಲ್ಲಿ ಮಾನವ ಮತ್ತು ನಾಗರಿಕ ಹಕ್ಕುಗಳನ್ನು ಘೋಷಿಸಿದವು. 1948 ರಲ್ಲಿ ಅಂತರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ರಚಿಸಲ್ಪಟ್ಟಿತು. 1950 ರಿಂದ ಪ್ರತಿವರ್ಷ ಡಿಸೆಂಬರ್ 10 ರಂದು ಮಾನವ ಹಕ್ಕುಗಳ ದಿನವನ್ನಾಗಿ ಆಚರಿಸಲಾಗುತ್ತದೆ. ಸ್ತ್ರೀ ಪುರುಷರೆನ್ನದೆ, ಪ್ರಾಣಿ ಪಕ್ಷಿಗಳೆನ್ನದೆ ಅವುಗಳ ಸ್ವಾತಂತ್ರ್ಯವನ್ನು ಕಾಪಾಡಬೇಕೆಂದು, ಮಾನವತಾವಾದದ ಆಧಾರದ ಮೇಲೆ ಮಾನವ ಹಕ್ಕುಗಳ ಆಯೋಗ ಘೋಷಿಸಿದೆ. ಮಾನವತಾವಾದ ಮಹಿಳೆಯರನ್ನು ಮಹಿಳಾ ಶಾಸನಗಳ ಮೂಲಕ ರಕ್ಷಿಸಿದರೆ, ಬಾಲಕರನ್ನು ಬಾಲಕಾರ್ಮಿಕ ಶಾಸನದ ಮೂಲಕ ರಕ್ಷಿಸುತ್ತದೆ. ಮಾನವತಾವಾದ ಪರಹಿತಕ್ಕಾಗಿ ನಡೆಸುವ ಪ್ರತಿಯೊಂದು ಕಾರ್ಯದ ನಾಡಿಮಿಡಿತವಾಗಿದೆ. ಒಳಧ್ವನಿಯಾಗಿದೆ. ಮಾನವತಾವಾದ ಇಂದು ಮಾನವ ಕಲ್ಯಾಣದಿಂದ ಹಿಡಿದು ಪ್ರತಿಯೊಂದು ಜೀವಿಯ ರಕ್ಷಣೆಯವರೆಗೆ ವ್ಯಾಪ್ತಿಯನ್ನು ಹೊಂದಿದೆ. ಒಟ್ಟಿನಲ್ಲಿ ಮಾನವತಾವಾದದ ವ್ಯಾಪ್ತಿ ವಿಶಾಲವೂ ಹಾಗೂ ವ್ಯಾಪಕವೂ ಆದ ಒಂದು ಸಿದ್ಧಾಂತವಾಗಿದೆ.

## ಅಡಿಟಿಪ್ಪಣಿಗಳು

1. ಎಚ್.ಕೆ.ರಾಮಚಂದ್ರಮೂರ್ತಿ (ಅನು): ಠಾಕೂರರ ಮಾನವತಾ ಸಿದ್ಧಾಂತ : , 1975, ಪು. 3.
2. ಅಲೆನ್‌ಬ್ಲಾಕ್ ಮತ್ತು ಅಲಿವರ್ ಸಟ್ಯುಲಿಬ್ರಾಸ್ (ಸಂ): ಆಧುನಿಕ ವಿಚಾರದ ಹಾರ್ಪರ್ ಶಬ್ದಕೋಶ, ಪು. 291–292.
3. ಕೆ.ಎಲ್.ಗೋಪಾಲಕೃಷ್ಣರಾವ್(ಅನು): ತತ್ವಶಾಸ್ತ್ರ ಎಂದರೇನು? ಲೇ–ಕಿರಿಲೊಂಕೊ.ಎಲ್.ಕೋರ್ಷುನೋವ್, 1995, ಪು. 297–298.
4. I. Frolow : Dictionary of Philosophy, 984, p.178.
5. ಪ್ರೇಮಚಂದ್: ಮಹಾಜನೀ ಸಭ್ಯತಾ (ಹಿಂದಿ ಮಾಧುರಿ ಭಾಗ–3), ಪು. 194.
6. ಕನ್ನಡ ವಿಶ್ವಕೋಶ : ಸಂಪುಟ–13, ಪ್ರಸಾರಾಂಗ, ಮೈಸೂರು ವಿ.ವಿ., ಪು. 173.
7. The New Encyclopedia Britanica : Vol–6, 1988, p.137.
8. The Encyclopedia of Religion : Vol-6, p. 290.
9. ಓ.ಎಲ್.ನಾಗಭೂಷಣಸ್ವಾಮಿ : ವಿಮರ್ಶೆಯ ಪರಿಭಾಷೆ, 1983, ಪು. 194.
10. The Encyclopedia of Religion :Vol-6, p. 290.
11. The Encyclopedia of Religion : Vol-6, 1987, p. 511.
12. ಸಂ. ಪ್ರೊ. ಜಿ.ವೆಂಕಟಸುಬ್ಬಯ್ಯ : ಕನ್ನಡ–ಕನ್ನಡ–ಇಂಗ್ಲೀಷ ಪಾರಿಭಾಷಿಕ ನಿಘಂಟು', ಪು. 504–505.
13. Ted Honderich, the Oxford Companion to Philosophy, p. 375.
14. ಗೌರೀಶ ಕಾಯ್ಕಿಣಿ : ನವ ಮಾನವತಾವಾದ, 1987, ಪು. 17.
15. ಎಚ್.ಕೆ.ರಾಮಚಂದ್ರಮೂರ್ತಿ: ಠಾಕೂರರ ಮಾನವತಾ ಸಿದ್ಧಾಂತ, 1975, ಪೀಠಿಕೆ, ಪು.3

16. ಓ.ಎಲ್.ನಾಗಭೂಷಣಸ್ವಾಮಿ : ವಿಮರ್ಶೆಯ ಪರಿಭಾಷೆ, 1983, ಪು. 194.
17. ಎಚ್.ಕೆ.ರಾಮಚಂದ್ರಮೂರ್ತಿ: ಠಾಕೂರರ ಮಾನವತಾ ಸಿದ್ಧಾಂತ, 1975, ಪು. 3.
18. ಗೌರೀಶ ಕಾಯ್ಕಿಣಿ : ನವ ಮಾನವತಾವಾದ, 1987, ಪು. 17.
19. ಬಿ.ವಿ.ವೀರಭದ್ರಪ್ಪ: ಧರ್ಮ ಮತ್ತು ವೈಚಾರಿಕತೆ, 1999, ಪು. 44.
20. ಕನ್ನಡ ವಿಶ್ವಕೋಶ: ಸಂಪುಟ–13, ಪು. 173.
21. ಅದೇ, ಪು. 174.
22. ಎಂ. ಎಂ. ಕಲಬುರ್ಗಿ (ಸಂ): ಬಸವಣ್ಣನವರ ವಚನ ಸಂಪುಟ: ಸ.ವ.ಸಂ.–1, ವಚನ–247, 1988, ಪು. 61.